'ಗೋಪಾಲಕೃಷ್ಣ'

ಬೆಲೆ: 0-4-0

"ರೈತವಿಜಯ"

(ಸಾಮಾಜಿಕ ಯಕ್ಷಗಾನ ಪ್ರಸಂಗ)

ಬರೆದವರು:

'ಗೋಪಾಲಕೃಷ್ಣ'

ಪ್ರಕಾಶಕರು:

ಮಂಗಳೂರು ತಾಲೂಕು ರೈತ ಸಂಘ
ಮೈದಾನ್ ರಸ್ತೆ, ಮಂಗಳೂರು

ಕಥಾ ಸಾರಾಂಶ

ನೆಮ್ಮೂರು ಎಂಬ ರಾಜ್ಯದಲ್ಲಿ ಮಾಬುಭೂಪನೆಂಬ ರಾ
ಅವನಿಗೆ ಕೊರಗನೆಂಬ ಪೊಕ್ಕಲಿದ್ದನು. ಕೊರಗನ ಹೆಂಡತಿ ದ
ಬ್ಬರು ಧನಿಯು ಅಪಾರ ಸುಲಿಗೆಗೆ ಒಳಗಾಗಿ ಬಹಳ ಕಷ್ಟಪ

ಒಂದು ದಿನ ತನ್ನ ಕಷ್ಟದ ಕುರಿತು ಕೊರಗನು ಚಿಂತಿ
ನೆರೆಯ ಸುಬ್ಬನೆಂಬವನು ರೈತರು ಒಗ್ಗಟ್ಟಾಗಬೇಕೆಂದು ಸೂ
ಇಬ್ಬರೂ ಆ ಬಗ್ಗೆ ಚರ್ಚಿಸಿ ಕೊನೆಗೆ ರೈತರನ್ನು ಒಂದು
ಹೊರಡುವರು.

ರೈತರು ಒಂದಾಗುತ್ತಿದ್ದಾರೆಂಬ ವಿಷಯವನ್ನು ಬೊ
ಯೆಂಬ ಒಬ್ಬ ಚಾಡಿಗಾರನು ಬಂದು ಮಾಬುಭೂಪನ ತಾಯಿ
ವನು. ಆಕೆ ರೈತರನ್ನು ಸದೆಬಡಿಯಲು ಮಗನನ್ನು ಪ್ರೇರೇ
ಪಿಸುವಳು.

ಮಾಬುಭೂಪನು ಎಷ್ಟು ಬೆದರಿಸಿದರೂ ರೈತರು ಬಗ
ಇದನ್ನು ಕಂಡು ಭೂಪನು ತನ್ನ ಮಂತ್ರಿಯ ಕೂಡೆ ಆಲೋ
ಮಂತ್ರಿಯು ಒಂದೆಡೆಯಿಂದ ದಬ್ಬಾಳಿಕೆಗಾರಂಭಿಸಿ ಇನ್ನೊಂದ
ಕಪಟ ಸಂಘಗಳನ್ನು ಕಟ್ಟಹತ್ತುವನು. ಆಗ ಕೊರಗನ
ಯನ್ನು ಇದಿರಿಸಲು, ಅವರಿಬ್ಬರೊಳಗೆ ಉಗ್ರ ಕಾಳಗ ನಡೆ
ಗನು ಮಂತ್ರಿಯ ಬಾಣದೇಟಿಗೆ ಮೂರ್ಛೆಗೊಂಡು ಬಿ
ಅಷ್ಟರಲ್ಲಿ ರೈತರ ಒಗ್ಗಟ್ಟಿನ ಬಲ ಮನುಷ್ಯರೂಪದಲ್ಲಿ ಬಂದ
ನನ್ನು ಮಂತ್ರಿಯ ಸೆರೆಯಿಂದ ಬಿಡಿಸುವುದು. ಅದುವೇ "ಜನ

ಆನಂತರ ಭೂಪನ ಇನ್ನೋರ್ವ ಚೇಲ 'ಮೋಸನಾ
ರನ್ನು ಸವಿಮಾತುಗಳಿಂದ ಮೋಸಪಡಿಸಲು ಯತ್ನಿಸಿ ವಿ
ವನು. ಇದನ್ನು ಕಂಡು ಮಂತ್ರಿಯು ಶ್ವೇತದ್ವೀಪಕ್ಕೆ ಹೋ
ಪಾತಾಳಕ್ಕೆ ಮುಂದುವರಿದು ರಕ್ಕಸರ ಸಹಾಯ ಪಡೆದು ಬ
ಶಕ್ತಿಯ' ಕೂಡೆ ಯುದ್ಧ ಮಾಡುವನು. ಯುದ್ಧದಲ್ಲಿ ವ
ಮಡಿಯುವನು.

ಬಳಿಕ ಮೋಸನಾಥನೂ ಇದೇ ರೀತಿ ಪ್ರಯತ್ನಪಟ್ಟು
ಹೋಗಲು ಪಾತಾಳಪತಿಯು ಬರುವನು. ಆತನೂ ಯುದ್ಧ
ಯಲು ಭೂಪನು ಸ್ವತಃ ಯುದ್ಧ ಮಾಡುವನು. ಯುದ್ಧದಲ್ಲಿ
ಜಯಸಂಪಾದಿಸುವುದು. ಮಾಬುಭೂಪನರಾಜ್ಯವು ರೈತರದಾ

ಎರಡು ಮಾತು

ಯಕ್ಷಗಾನ ಬಯಲಾಟಗಳು ತುಳುನಾಡ ಜನಪದ ಕಲೆಯಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನಗಳನ್ನು ಪಡೆದಿವೆ.

ನಮ್ಮ ನಾಡಿನ ಪ್ರಗತಿಯನ್ನು, ಅವಿದ್ಯಾವಂತ ಜನಸಮುದಾಯದ ಶಿಕ್ಷಣವನ್ನು ಬಯಸುವವರಿಗೆ ಇವು ಪ್ರಬಲ ಸಾಧನಗಳನ್ನೊದಗಿಸುವುವು.

ನಮ್ಮ ರೈತ ಸಮುದಾಯ ಇನ್ನೂ ಕೋಟಿ ಚೆನ್ನಯರ ಕಾಲದಲ್ಲೇ ಇದೆ. ಭೂಮಾಲಕ ಸಾಹುಕಾರರ ನಿರಂತರ ಸುಲಿಗೆಯಲ್ಲಿ, ಜನತೆಯ ಜೀವನ ಕ್ರಮದಲ್ಲಿ, ವಿದ್ಯೆ ಸಂಸ್ಕೃತಿಗಳಲ್ಲಿ, ಹೆಚ್ಚಿನ ಬದಲಾವಣೆಗಳೇನೂ ಆಗಿಲ್ಲ. ಗಟ್ಟದ ತೋಟದ ದೊರೆಗಳ, ಮದ್ರಾಸಿನ ಜಮಿನ್ದಾರ ಮಂತ್ರಿಗಳ ಮೋರೆ ನೋಡಿ ಕುಳಿತಿರುವ ಇಂದಿನ ತುಳುನಾಡ ಜನತೆಯಲ್ಲಿ ಹಿಂದಿದ್ದ ಸ್ವಾಭಿಮಾನ ಕೂಡಾ ಇಂದು ಇಲ್ಲದಂತಾಗಿದೆ. ಸ್ವಭಾಷೆ, ಸ್ವದೇಶಗಳಂತೂ ದೂರದ ವಿಚಾರಗಳಾಗಿಯೇ ಉಳಿದಿವೆ.

ಇಂತಹ ಪರಿಸ್ಥಿತಿಗಳಲ್ಲಿ ಜನಸಮುದಾಯದ ಸ್ವಾಭಿಮಾನವನ್ನು ಎಚ್ಚರಗೊಳಿಸಿ, ಪ್ರಗತಿಯ ಹಾದಿಯಲ್ಲವರನ್ನು ಕೊಂಡೊಯ್ಯಲನುಕೂಲವಾಗುವಂತೆ ಸಾಮುದಾಯಿಕ ಶಿಕ್ಷಣ ಕಾರ್ಯವನ್ನು ನಡೆಸುವುದು ಅವಶ್ಯವಿದೆ. ಈ ಮಹಾಕಾರ್ಯದಲ್ಲಿ ಯಕ್ಷಗಾನ ಬಯಲಾಟಗಳ ಸ್ಥಾನವೇನೂ ಕಡಿಮೆಯಾದುದಲ್ಲ. ಆಂಧ್ರ ಕೇರಳಗಳಲ್ಲಿ ಬುರ್‍ರಕಥಾ, ಕಥಕ್ಕಳಿಗಳು ಪಡೆದಿರುವ ಸ್ಥಾನವನ್ನು ಕಂಡರೆ ನಮಗಿದರ ಅರಿವಾಗುವುದು.

ನಮ್ಮಲ್ಲಿಯ ವಿದ್ಯಾವಂತರೂ, ಕಲಾವಿದರೂ, ಈ ಬಗ್ಗೆ ಇನ್ನಾದರೂ ಯೋಚನೆ ಮಾಡಲೆಂಬ ಉದ್ದೇಶದಿಂದ ಈ ಪ್ರಸಂಗ ಬರೆಯಲಾಗಿದೆ. ಈಗಿರುವ ಹಳೆಯ ಮತ್ತೆ ಹೊಸ ಪ್ರಸಂಗಗಳಲ್ಲಿ ತೋರಿಕೆಯ ಒಂದಿಷ್ಟು ವ್ಯತ್ಯಾಸವಿದ್ದರೂ ತಿರುಳಲ್ಲಿ ಏನೂ ವ್ಯತಾಸವಿಲ್ಲ. ಪುರಾತನ ಕಟ್ಟುಕಥೆಗಳಿಗೆ, ದೇವದೇವಿಯರಿಗೆ ಸಂಬಂಧಿಸಿದ ಪ್ರಸಂಗಗಳ ಬದಲು ಜನಜೀವನಕ್ಕೆ ಸಂಬಂಧಿಸಿರುವ ಪ್ರಸಂಗಗಳನ್ನು ಬರೆಯಬೇಕು; ಈ ಜನಪದ ಕಲೆಯ ಬಗ್ಗೆ ಕೆಲ ವಿದ್ಯಾವಂತರು ತಾಳಿರುವ ತಿರಸ್ಕಾರ ಭಾವನೆ ಹೋಗಬೇಕು; ಕೆಲವೇ ಪ್ರತಿಗಾಮಿಗಳು ಅವು ತಮ್ಮ ಗುತ್ತಿಗೆ

ಗಳಿಂದು ತಿಳಿದು ಅವುಗಳ ದುರುಪಯೋಗ ಮಾಡುವುದು ನಿಲ್ಲ
ಯಕ್ಷಗಾನ ಕಲಾಪ್ರೇಮಿಗಳು ಇನ್ನಾದರೂ ಎಚ್ಚತ್ತು ಈ
ಕೆಲಸಕ್ಕೆತೊಡಗಬೇಕು. ಇದಿಷ್ಟೇ ಈ ಬರಹದ ಮೂಲೋ
ಹಾಡುಗಾರಿಕೆ ಮಾತುಗಾರಿಕೆಗಳನ್ನರಿಯದ, ಹಿಂದೆಂದೂ ಬ
ನನ್ನಂಥವನೊಬ್ಬನ ಈ ತಪ್ಪುತಪ್ಪಾದ ಬರವಣಿಗೆಂತು ಉ
ದರೂ ಬೇರೆನಿದ್ದೀತು?

ಚೀನೀ ರೈತರ ವಿಜಯವೇ ಈ ಕಥೆಗೆ ಸ್ಫೂರ್ತಿಯಿತ್ತ
ವಸ್ತು. ಇಂದಿನ ನಮ್ಮ ರೈತರಿಗೂ ವಿಜಯದ ಹಿಂದಿನ ಚೀ
ರಿಗೂ ಬಹಳ ಸಾಮ್ಯವಿದೆ. ಅವರ ಅಪಾರ ಅವಿದ್ಯೆ, ಬಡತನ,
ದಾಸ್ಯಗಳಲ್ಲಿ ಸಮಾನತೆಯಿದೆ. ಅಂತೆಯೇ ವಿಮೋಚನೆಯ
ಯಲ್ಲೂ ಸಾಮ್ಯತೆಯಿರುವುದು ಸಹಜ. ಈ ವಿಷಯವನ್ನು
ದಲ್ಲಿಟ್ಟು, ಮೂಲವಸ್ತುವನ್ನು ನಮ್ಮ ನಾಡಿಗೊಪ್ಪುವಂತೆ
ರೂಪಾಂತರಿಸಲಾಗಿದೆ.

ಪ್ರಸಂಗದ ಕಥೆ ಕಾಲ್ಪನಿಕವೆಂದು ಬೇರೆ ಹೇಳಬೇಕಾಗಿ
ಬಗ್ಗೆ ಯಾರೂ ತಪ್ಪು ತಿಳಿದುಕೊಳ್ಳಬಾರದು. ಸಂಪ್ರದಾಯ
ತೊಲಗಿದುದಕ್ಕೆ ಬೇಸರಿಸಲೂಬಾರದು.

ಇದರಲ್ಲಿ ತುಂಬಿರುವ ಅಸಂಖ್ಯಾತ ಲೋಪಗಳನ್ನು
ಸಬೇಕೆಂದು ವಾಚಕರಲ್ಲಿ ನನ್ನದೊಂದು ಅರಿಕೆಯಿದೆ. ನನ್ನೀ
ಪ್ರಯತ್ನದ ಮೂಲೋದ್ದೇಶಸಾಧನೆಯ ಮುಂದಾಳ್ತನವ
ಸಮರ್ಥರಾದವರನ್ನು ಬೆಳಕಿಗೆ ತರುವುದರ ಮೂಲಕ ಆ ಕ್ಷಮೆ
ವ್ಯಕ್ತಪಡಿಸಿದರೆ ಮಾತ್ರ ನನ್ನ ಅರಿಕೆ ವಾಚಕರಿಗೆ ಮನವರಿಕೆಯ
ತೆಂದು ಭಾವಿಸುವೆನು.

ಇತಿ

'ಗೋಪಾಲಕೃಷ್ಣ

ರೈತ ವಿಜಯ

ಯಕ್ಷಗಾನ ಪ್ರಸಂಗ

ವಾರ್ಧಿಕ

ನೆರೆದ ಜನಗಣಕು ಗಣಪತಿಗು ವಂದಿಸಿ ಕಥೆಯ। ನೊರೆವೆ ನವ ಯುಗದಿ ಹಲವಾರು ದೇಶಗಳಲ್ಲಿ। ಸಿರಿವಂತ ಸಾಮಂತ ಮಂತ್ರಿಗಳ ರಾಜ್ಯಭಾರದಿ ಜನತೆ ಬಳಲುತಿರಲು॥ ಕೊರಗ ದೇವಿಯರೆಂಬ ರೈತ ದಂಪತಿಗಳೀ। ಧರೆಯ ನಮ್ಮೂರೆಂಬ ರಾಜ್ಯದಲಿ ರಾವಣಗೆ। ಸರಿಯಾಗಿ ಮೆರೆಯುತಿಹ ಮಾಬುಭೂಪನ ಗೇಣಿಯೊಕ್ಕಲೆಂದಿರುತಿರ್ದರು ॥ ೧ ॥

ರಾಗ ಸೌರಾಷ್ಟ್ರ, ತ್ರಿವುಡೆತಾಳ

ಇತ್ತ ಕೊರಗಾದಿಗಳು ಎಡೆಬಿಡ। ದುತ್ತು ಕಷ್ಟದಿ ಬಿತ್ತಿಬೆಳೆಸಿದ। ತುತ್ತನೆಲ್ಲವ ಭೂಪನುಂಗಲು। ಸತ್ತೆವೆಂದು ॥ ೧ ॥ ಮಡದಿ ದೇವಿಯು ಸುತಸಹಿತ ಮೊರೆ। ಯಿಡಲವರ ಸಂತೈಸೆ ಕೊರಗನು। ಕಡವ ತರಲೆ ನೆಗೊಡವೆಬೇಕೆನೆ। ಮಡದಿಯುಂದು ॥ ೨ ॥ ಚಿನ್ನವೆಲ್ಲವ ಸೊತ್ತೆಯಿಟ್ಟಿಹೆ। ಯೆನ್ನ ಕೊರಳಲಿ ತಾಳಿಯೊಂದೇ। ಇನ್ನುಳಿದ ಬಂಗಾರ ಸಿಗುವುದೆ। ಮುನ್ನಿನಂತೆ ॥ ೩ ॥ ಬಾಲವೆಮಗೆನೆ ಕೊರಗ ಶೋಕಿಸಿ। ಹಾಲಲಾಟದ ಬರಹ ವೀಪರಿ। ಸೋಲತಂದಿತೆ ವಿಧಿಯೆ ಕರುಣಿಸಿ। ಪಾಲಿಸೆನಲೂ ॥ ೪ ॥

ಭಾಮಿನಿ

ಅತ್ತ ಭೂಪನು ಬಕನೆಮೀರುತ। ಲೆತ್ತರದ ಸೌಧದಲಿ ಜನತೆಯ ನೊತ್ತಿಸುಲಿದಿಹ ವಿವಿಧ ಸಿರಿಗಳ ಬಲದಿ ಸುಖದಿಂದ ॥ ಸುತ್ತಲಿನ ಬಡತನವ ಗಣಿಸದೆ। ಕುತ್ತವಿಲ್ಲದೆ ಜೀವಿಸಲು ಜನ। ಕತ್ತಿಗಳ ಪರಿಬಾಳೆ ಭೂಷಣವೆಂದು ಬಗೆದಿರ್ದ ॥ ೧ ॥

ರಾಗ ಸೌರಾಷ್ಟ್ರ. ತ್ರಿವುಡೆತಾಳ

ಚರನನೋಲಗಕೊಂದುದಿನದಲಿ। ಬರಿಸಿಪೇಳಿದ ನೆಲವೊ ಚಾರಕ। ಕೊರಗನನು ನೀ ತ್ವರಿತದಿಂದಲಿ। ಕರೆದುತಾರೋ ॥ ೧ ॥ ಒಡೆಯನಾಜ್ಞೆಯ ವಹಿಸಿ ಸೇವಕ। ನೊಡನೆ ಕೊರಗನ ಬಳಿಗೆ ಬಂದೆ

ಲೆ। ನಡೆಯೊನಡೆಯೆನೆ ಕೊರಗನೆಂದನು। ತಡೆಯಿರೆಂದು
ಗಂಜಿಯೂಟವ ಮುಗಿಸಿ ಬರುವೆ ಸ। ಮಂಜಸದ ಮಾತೆ
ಮನೆ। ರಂಜಿಸದು ಧನಿಗೆನುತ ಪೊರಮಡು। ತಂಜುತಾಗ॥ ೩॥
ಚಾರಕ ತಿಳುಹಲವನತಿ। ಮುನಿದು ನಡೆನಡೆ ಮುಡಿಯ ಹಿ
ರೆನಲು ಸೇವಕ ಮರಳಿಯೋಡುತ ಮನೆಗೆ ಬಂದು॥ ೪॥ ಕೇ
ಗನೆ ಧನಿಯು ತಾನತಿ। ಸಿಟ್ಟುಗೊಂಡಿಹ ಹೊರಡು ಬೇಗನೆ।
ಡುಗೆಯಲ್ಲೆನಲು ಬಟ್ಟಲ ಬಿಟ್ಟು ಹೊರಟ॥ ೫॥

ಭಾಮಿನಿ

ಕೊರಗತಾನೈತಂದು ಮುಗಿಯಲು। ಕರಗಳನುಖಳಪ
ಬೊಬ್ಬಿಡು। ತಿರದೆ ಝುಡಿಯುತ ಕೇಳಲೆಲೆತಡವೇಕೆ ಬರಲ
ಮರೆತು ಕ್ಷಮಿಸೆಂದೆನುತ ಧನಿಪದ। ಕೆರಗುವಾತನಿಗೊದೆಯೆ ತ
ಕರೆದುದೇಕೆಂದವನು ಕೇಳಲು ಖೂಳನಿಂತೆಂದ॥ ೨॥

ರಾಗ ಕಲ್ಯಾಣಿ, ಮಟ್ಟೆತಾಳ

ಎನ್ನಗದ್ದೆಗೇನು ಬಡವ। ನಿನ್ನ ಕೋಣ ಬಂದುದಿಲ್ಲ।
ನೆಂತೆ ಕಳುಹುಬೇಗ। ಕುನ್ನಿಕೇಳಿಲೆ॥ ೧॥ ಕೋಣವೊಂದು
ದಿಂದ। ಕಾಣೆಯಾಗಲಾನುಜತೆಗೆ। ಕೋಣಸಿಗದೆ ತಡೆದೆ
ಳಾಣೆದಿಟವಿದು॥ ೨॥ ಗತಿವಿಹೀನ ಕೋಣಬರಲಿ। ಜತೆ
ಮಾಡಿಕೊಳುವೆ। ಸುತನೆಬಡನೆ ಬಿಟ್ಟಿಗಾಗಿ। ಹಿತದಿ ಕಳುಹಿಸ
ಬಿಟ್ಟಿಗೈದು ಬಳಲಿಸುತನು। ಬಿಟ್ಟುಮನೆಯ ತೊಲಗಿಪೋದ।
ಕೀಗ ನಾನೆಬಹೆನು। ಕೊಟ್ಟೆ ವಾತನು॥ ೪॥ ಮಾತುಗೀತು
ನಗೆ। ಕೋತಿ ನಿನ್ನ ಬಾಕಿ ಗೇಣಿ। ಹತ್ತು ಮುಡಿಗಳಕ್ಕಿಂ
ಮಾತಿನಿಂದಿಡು॥ ೫॥ ಬೆಳೆಯು ನೀನೆ ಕೊಯಿಸೆ ಧನಿಯೆ।
ಲೆಂತು ಗೇಣಿಬಾಕಿ। ತಿಳಿಯೆ ನಾನು ಕರುಣೆದೋರಿ। ಕಳ
ಹುದು॥ ೬॥ ನಡೆಯೋ ಗೇಣಿಬಾರದಿರಲು। ಬಿಡೆನು ನಿನ್ನ
ಬೀಜ। ಮುಡಿಗಳನು ಬಾಯಿಮುಚ್ಚು। ನಡೆಯೊ ಗದ್ದೆಗ
ಎಂದು ಧನಿಯು ಹೊಡೆದು ನೂಕ। ಲಂದು ಕೊರಗತೋಕಿ
ಬಂದ ಕಷ್ಟವನ್ನು ನೆನೆದು। ಬೆಂದುಮರುಗುತ॥ ೮॥

ಭಾಮಿನಿ

ಹಾ ವಿಧಿಯೆ ಧನಿವರ್ಗದಡಿಯಲಿ। ನಾವು ನರಳುವ ಗತಿಯಿಂದೆಂದಿಗೆ। ಸಾವನೈದುವುದೈಯ್ಯೋ ಧನಿಕರ ಹಗೆಯುಬಡವರಿಗೆ॥ ಯಾವಕಾಲಕು ಸಲ್ಲದೆಂದೀ। ಭಾವಿಕರನುಡಿನಿಜವೆನುತಲತಿ। ನೋವಿನಿಂದಲ್ಲಿಂದ ತೆರಳಲು ಬಳಿಕಲೊಂದು ದಿನ॥ ೧॥

ರಾಗ ಸಾಂಗತ್ಯ, ರೂಪಕತಾಳ

ನೆರೆಮನೆ ಸುಬ್ಬನೈ। ತರಲೇನು ಸುದ್ದಿಯು। ವರ ಮಿತ್ರ ನುಡಿಯೆನೆ ಸುಬ್ಬ॥ ಭರದಿ ಚಿಂತಿಪೆಯೇಕೆ ಬಂದಬನ್ನವದೇನು। ಅರುಹೆನೆ ಕೊರಗನಿಂತೆಂದ॥ ೧॥ ಬಕನೆಂಬ ರಾಕ್ಷಸ। ನಖಿಳಘಾರುವರನು। ಸುಖದಿಕೊಂದುಂಡಂತೆ ನಮ್ಮ॥ ರಕುತವ ಹೀರುವ ಧನಿಗಳ ಕಾಟದಿ। ಸಖನಾನು ಚಿಂತಿಪೆ ಕೇಳು॥ ೨॥ ಕೊರಗನೀ ಮರುಗುವ। ಪರಿಯನಾತಿಳಿದಿರ್ಪ। ಕಿರುನುಡಿಯೊಂದ ನೀಕೇಳು॥ ವರ ರೈತರೊಂದಾಗಿ ಹಲವೆಡೆ ಹೊಯ್ದಾಡಿ। ದುರುಳರ ಗೆಲಿದಿಹರಂತೆ॥ ೩॥ ದುಡಿವ ರೈತನೆ ಹೊಲ। ದೊಡೆಯನೆಂಬುವ ಸತ್ಯ। ದಡಿಯೊಳು ರೈತರೊಂದಾಗಿ॥ ಕಡಿದೊಗೆದಿಹರಂತೆ ದಾಸ್ಯ ಸಂಕಲೆಗಳ। ಬಡವರ ಹಾದಿಯಿದಂತೆ॥೪॥ ಸುಬ್ಬನ ನುಡಿಗೆಂದ। ಕಬ್ಬಿಲಿಗರು ನಾವು। ಹಬ್ಬಿಹಧನ ವಿದ್ಯೆಯಿರದೆ॥ ಉಬ್ಬಿದುತ್ಸಾಹದಿ ಹೋರಾಡಲಾರೆವು। ಕೊಬ್ಬಿಹ ಧನಿಗಳ ಕೂಡೆ॥೫॥

ಭಾಮಿನಿ

ಗೆಳೆಯನೆಂದುದ ಕೇಳಿಸುಬ್ಬನು। ಬಳಿಕಲೆಂದನು ಕೊರಗ ಕೇಳೈ। ಬೆಳೆಗೆ ನೀರೆರೆದದನು ಬೆಳೆಸುವ ತೆರದಿ ನಾವಿಂದು॥ ಕಳೆದು ರಕ್ತವ ಖಳರಸಿರಿಯನು ಬೆಳೆಯಗೊಡುವೆವು ನಿಂತೆವಾದೊಡೆ। ಖಳರಿಗೊಣಬೈಹುಲ್ಲೆ ಗತಿಯಾಗುವುದು ಕೇಳಿಂದು॥ ೧॥ ನಮ್ಮ ಸುಲಿಗೆಯ ತಡೆವ ವಿದ್ಯೆಯ। ನೊಮ್ಮತದಿನಾವ್ಕಲಿತೆವೆಂದರೆ। ಸುಮ್ಮನಾಗಿಯೆ ಬರುವುದೈಘನವಿದ್ಯೆ ಧನಬಲವು। ನಮ್ಮ ತಲೆತಲೆ ಹೊಯ್ಸಿ ಕೊಲಿಸುವ। ಗುಮ್ಮರಾಟವ ನಿಲಿಸಲೈಕ್ಯವು। ತಮ್ಮ ಕೇಳೆಮ್ಮಸ್ತ್ರಬಿಡುಬಿಡು ಸಂಶಯವನೆಂದ॥ ೨॥

ರಾಗ ಭೈರವಿ, ಆದಿತಾಳ

ಕೊರಗನರಿತು ಧೈರ್ಯತಾಳಿ ನಡೆದ ಸಾಗುವ ।
ಸಂಘಕೆಲ್ಲ ಜನರು ಸೇರುವ ॥ ಕರೆದು ರೈತಜನರನೆಲ್ಲ ತಿ
ವ ॥ ಮುರಿದು ದಾಸ್ಯಸಂಕಲೆಯನು ಸುಖದಿ ಬಾಳುವ ।
ಸುಬ್ಬನೆಂದ ರೈತರೊಂದುಗೂಡಿ ಏಳುವ ॥ ಘೋರನರಕ
ಸ್ವರ್ಗಸುಖದಿ ಬಾಳುವ ॥ ಚೋರ ಧನಿಗಳಿಂದ ಸೂರೆ
ರೈತರು ॥ ಪೂರ ಕಳೆದ ಮೇಲೆ ಭೀತಿಯಿಲ್ಲವಿನ್ನು ಸತ್ತರು
ಹಣೆಯ ಬೆವರ ಫಲವನುಂಡು ಸೊಕ್ಕ ಧನಿಕರು ॥ ನ
ನೂದೆದು ಅಟ್ಟಹಾಸದಿಂದೆ ಕುಣಿವರು ॥ ನಮ್ಮ ಹಣೆ
ವಯ್ಯೋ ಸಾಕಿದೆನುತಹಳಿವುದೇ । ನಮ್ಮ ಹಣೆಯ ಕಣ್ಣ
ವನ್ನು ಸುಡುವುದೇ ॥ ೩ ॥ ಜಯವು ಕೆಂಪು ಧ್ವಜಕೆನುತ್ತ
ಗೂಡುವ । ಜಯವು ರೈತ ಸಂಘಕೆನುತ ಸಮರಪಥದಿ
ಹೊಲಕೆ ದುಡಿವ ರೈತನೊಡೆಯನೆಂಬ ನ್ಯಾಯ ನೆಲೆಸಲು
ರಾಜ್ಯವಳಿದು ಸುಖವು ನಮ್ಮ ಶ್ರಮವು ಫಲಿಸಲು ॥ ೪ ॥

ಭಾಮಿನಿ

ಈ ತೆರದೊಳಾ ರೈತ ಸಂಘದ । ಮಾತುಗಾರರು ನು
ಲು । ಭೀತಿ ತೊರೆಯುತ ಜನತೆ ತಾನೊಂದಾಗೆಯೋಚಿಸು
ಕಿಯು ತಾ ಬೊಗ್ಗತೊಂಡೆಯು । ಆತುರದಿ ನಡೆತಂದು
ಮಾತೆಗರುಹಲು ವನಿತೆ ಭೂಪನೊಳೆಂದಳಿಂತೆಂದು ॥ ೧ ॥ ಮ
ದ ಮಾನ ಹೋದುದು । ವಿಗಡ ರೈತರ ಸಂಘದಿಂದಿ ।
ಸಂಪದಕೆ ಕೊರತೆಯು ಖಚಿತವದರಿಂದ ॥ ಹಗೆಗಳೆಲ್ಲರ ಸ
ನಡೆ । ಮಗುನೆ ನಡೆಯೆಂದೆನಲು ಭೂಪನು । ಬಿಗಿದ
ತೂಗಿ ಬಂದಿಂತೆಂದ ರೈತರೊಳು ॥ ೨ ॥

ದಾಟಿ— ಛಲವೇ ಕಡುಖಿಲಬಾಲರಿಗೇ—ಎಂಬಂತೆ

ಬಿಡಿರೇ । ನಿಮ್ಮಯ ಸಂಘವನೀಗ್ । ಬಿಡಿರೇ ॥ ಪಲ್ಲ ॥
ಸಂಘವ ಪುಡಿಪುಡಿ ಗೈವೆನು । ಕಡುಗಲಿತನ ನಿಮ್ಮೊಡೆಯನ ಕ
ಬಿಡಿರೇ ॥ ೧ ॥ ಹತ್ತಿಹುದೇನೆಲೆ । ಪಿತ್ಥವು ನಿಮ್ಮಯ ನೆತ್ತಿ
ಯಿರದ । ನಿಳಿಸುವೆ ಕುತ್ತವಿದು ಹೊಸತು । ಸುತ್ತಲು

ತುಕ್ತಿಗೆ ಗತಿಯಿರದ । ಹಾದಿಯು । ತೊತ್ತುಗಳಿರ ನೀವ್ । ಸುತ್ತುವರಿಯದಿರಿ। ಕತ್ತೆಗಳಿವಕೆ ಮದ । ವೇರಿದೆ । ಕುತ್ತಿಕೊಲುವೆನಾ । ಸುತ್ತರವನ್ನಿವರಿತ್ತರೆ ಬಲುಜವದಿ ॥ಬಿಡಿರೇ ॥ ೨ ॥

ರಾಗ ಕಾಂಬೋಧಿ, ಮಟ್ಟೆತಾಳ

ಏನೆಲಾ ಮದಾಂಧ ಸುಬ್ಬ । ಹೀನರಿವರ ತಲೆಯತುಂಬಿ । ಹಾನಿಯೇಕೆ ಗೈವೆಯೆನಗೆ । ಮಾನಹೀನನೆ ॥ ೧ ॥ ಧನಿಯೆ ನಾವು ದುಡಿದುದನ್ನು । ಉಣಲು ನಾವೆ ಹಾನಿಯೆಂತು । ನಿನಗೆ ನೀನು ದುಡಿಯಬಾರ ದೆನುವೆಯೇತಕೆ ॥ ೨ ॥ ಸಾಕು ಬಿಡೆಲೊ ಹೀನ ಮನುಜ । ಲೋಕದಲ್ಲಿ ಶ್ರೇಷ್ಠರಾವು । ಯಾಕೆ ದುಡಿದು ನರಳಿಸಾಯು । ಬೇಕು ಸಾಕೆಲೆ ॥ ೩ ॥ ನಿಜಕು ನಿಮ್ಮ ಗರ್ವ ಬಿಡದು । ಸುಜನರಂತೆ ಬಾಳಲಿಂದು । ವಿಜಯ ಪಥದೊಳೆನ್ನ ಸೇರಿ । ರುಜೆಯ ಕಳೆಯಿರಿ ॥ ೪ ॥

ಭಾಮಿನಿ

ಬಣಗು ರೈತರು ಭೂಮಿಪತಿಗಳ । ಕೆಣಕತೊಡಗಿಹರಿನ್ನು ಪೂರ್ವದ । ಗಣಿತವಹ ಸುಲಿಗೆಯನು ನಡೆಸಲು ಬೇರುಪಾಯವನು ॥ ಎಣಿಸಬೇಹುದು ಧನಿಯ ಭೀತಿಗೆ । ಮಣಿವ ಕಾಲವು ಕಳೆಯಿತೆನುತಾ । ಕೆಣಕು ಬು[illegible]ಯ ಭೂಪ ಕರೆದನು ತನ್ನ ಮಂತ್ರಿಯನು ॥ ೧ ॥

ರಾಗ ಬಿಲಹರಿ, ಏಕತಾಳ

ಮಂತ್ರಿವರನೆ ಕೇಳು । ರೈತರ । ಪಂಥವೆಮಗೆ ಹಾಳು । ಅಂತ್ಯಗೊಳಿಸಲಿವ ರೈಕ್ಯದ ಸಂಘವ । ತಂತ್ರವ ಯೋಚಿಸಿ ಹೂಡೈ ಬೇಗನೆ ॥ ೧ ॥ ಹಿಂದಿನಂತೆ ಯಿವರು । ದರ್ಪಕೆ । ಕುಂದದೆ ಮುಂಬಹರು ॥ ಮುಂದೀಪರಿಯಲಿ ನಡೆಯಲು ಬಿಟ್ಟರೆ । ಕುಂದುವುವೆಮ್ಮ ವಿಲಾಸ ವೈಭವಗಳು ॥ ೨ ॥

ಭಾಮಿನಿ

ಕೇಳಿ ಸಚಿವನು ನುಡಿದನೆಲೆ ಭೂ । ಪಾಲ ಚಿಂತಿಸಬೇಡ ಮನದಲಿ । ತಾಳು ನಾನಿದಕೊಂದುಪಾಯವನೀಗ ರಚಿಸುವೆನು ॥ ಹಾಳುಗೈಯುತಲವರ ಸಂಘವ ಖೂಳರನು ಹೊಸ ಕಪಟ ಸಂಘದ । ಜಾಲದಲಿ ಕೆಡಹುತ್ತ ಮೋಸವಗೈದು ಗೆಲಬಹುದು ॥ ೧ ॥

ರಾಗ ಕಾಂಬೋಧಿ, ಅಷ್ಟತಾಳ

ಬಳಿಕ ಮಂತ್ರಿಯು ತನ್ನಭಟರಿಂದೆ ಹಲವರ । ನೆಳೆಸಿ
ನೆಗೆ॥ ಖಳರಿಂದ ಕಪಟ ಸಂಘವಗೈಸಿ ಕೆಲವರ । ಬಲದಿ
ಸಿದ ॥ ೧ ॥ ಅರಿತು ಮಂತ್ರಿಯ ಮೋಸವನು ವೀರ ಕೊರಗನ
ದಿ ಬಂದಿಂತೆಂದನು ॥ ದುರುಳ ಮಂತ್ರಿಯೆ ನಮ್ಮ ಜನರ
ತೀಗ। ಮರೆಮೋಸಗೈಯುವೆಯಾ ॥ ೨ ॥ ದೇವಗೈದಿಹ ಪದ್ಧತಿ
ಪಾಳ್ಗೆಯ್ಯೆ । ನೀವು ಪೋಪಿರೆ ನಾಕಕೆ । ನೋವು ದೇವನಿಗ
ಗೈವೆನು ನಿಮ್ಮ । ಕಾವವರ್ಯಾರಿಹರು ॥ ೩ ॥ ಕಪಟ ಸನ್ಯಾಸಿ
ನಿಮ್ಮಯ ಮೇಲೆ । ವಿಪರೀತದ ಮಮತೆಯೇ ॥ ಕಪಟ ರ
ಕೊಲುವನೆಂದರಿಯಿರೆ । ಅಪಹಾಸ್ಯ ನುಡಿಯೇಕೆ ॥ ೪ ॥

ರಾಗ ಕಾಂಬೋಧಿ, ಮಟ್ಟೆತಾಳ

ಏನೋ ಸೊಕ್ಕಬಡವ ಕೊರಗ । ಜಾಣನಂತೆ ನುಡಿವೆ
ಹೀನತನದಿ ಸೆರೆಗೆ ಪೋಪೆ । ಹಾನಿಹೊಂದುವೆ ॥ ೧ ॥ ಹಿಂದೆ
ರಾಖ್ಯಗೋರ್ವ । ಚಂದುಗಿಡಿಯುಸಚಿವನಿದ್ದ । ಸಂದ ಕೋಟಿ
ರನು ಬಾಧಿಸಿಹನಲೆ ॥ ೨ ॥ ಬಡಿದುಕೊಲುವೆ ನಿಮ್ಮನೆಲ್ಲ ।
ಬೇಕು ರೈತ ಸಂಘ । ಕೆಡುಕು ಪರರ ತತ್ವ ನಿಮಗೆ । ಸುದ
ವ ॥ ೩ ॥ ಪರರು ದುಡಿದ ಫಲವನೆಲ್ಲ । ದೊರೆಗಳೆಂದು
ತಿನುವ। ಪರಮ ತತ್ವವೇನಿದೆಮ್ಮ । ಸರರ ತತ್ವವೇ ॥ ೪ ॥

ರಾಗ ಮುಖಾರಿ, ರೂಪಕ ತಾಳ

ಕಬ್ಬಿಲಿಗನೆ ನುಡಿಗವ । ನೆಬ್ಬರಿಸುತ ಶರತೆಗೆದೆಲೆ ।
ಮಾಡುವೆ ಮಾರಿಗೆ । ಕೊಬ್ಬಿರುವೊಡೆತಡೆಸೀ ॥ ೧ ॥ ನುಡಿದೀ
ಳು ಮಂತ್ರಿಯು । ಬಿಡೆಬಾಣವನಾ ರೈತನು । ಕಡಿದೊಗೆಯು
ಶರವನು । ತಡೆಯೆನುತಿರದೆಸೆಯೆ ॥ ೨ ॥ ಸಚಿವನು ತಡೆಯ
ದೊಂ । ದುಚಿತದ ಶರಬಿಡೆ ಮೂರ್ಛೆಯ । ಸುಚರಿತನೈದಿಟ
ಯ । ರಚನೆಯಮೋಡಿಯಲಿ ॥ ೩ ॥ ವೀರನ ಬಂಧಿಸಿರಥ
ಸಾರುವೆನೆಂದಾ ಮಂತ್ರಿಯು। ಜಾರಲು ಕೊರಗನು ನೆನೆಯಲು
ತ ಬಂದೋರ್ವ ॥ ೪ ॥

ರಾಗ ಶಂಕರಾಭರಣ, ತ್ರಿವುಡೆ ತಾಳ

ನಿಲ್ಲುನಿಲ್ಲೆಲೆ ಖೂಳ ಸಚಿವನೆ । ಖುಲ್ಲತನವಿದು ನಡೆಯು ದೆಮ್ಮೊಳು । ಒಲ್ಲೆವೆನ್ನುತ ಸರಳನೆಚ್ಚಲು । ಬಿಲ್ಲು ಮುರಿಯೆ ॥ ೧ ॥ ಆರೆಲವೊ ನೀ ವೀರ ನಿನ್ನಯು । ಪಾರುಪತ್ಯವ ಮಾಡದಿರೆನಾ । ನೂರಿಗೊಡೆಯನ ಮಂತ್ರಿಯಾಗಿರ । ಲಾರೆನೆಂದ ॥ ೨ ॥ ಸುಲಿಗೆ ಖೋರರ ಮಂತ್ರಿ ಕೇಳೈ । ಬೆಲೆಯು ಮಾತಿದು ಮಂತ್ರಿಪದದಲಿ । ಕಳೆವೆ ಪ್ರಾಣವ ನೆನುತಲೆಚ್ಚನು । ಬಲದಶರವ ॥ ೩ ॥

ಭಾಮಿನಿ

ರೈತ ಜನತೆಯು ಶಕ್ತಿಯಿದುರೂ । ಪೆತ್ತಿಬಂದುದು ವೀರನಂದದಿ ಪಾತಕಿಯೆ ತಿನ್ನೆನುತ ಹೊಡೆಯಲು ಮಂತ್ರಿ ಮೈಮರೆತು ॥ ಸೋತು ಭಯದಿಂದೋಡೆ ಕುವರನು । ಭೀತಿಬೇಡಿನ್ನೆನುತ ಕೊರಗನೆ । ಪಾತಕಿಯ ಸೆರೆಯಿಂದ ಬಿಡಿಸಿದನೆಂದು ಸಂತಸದಿ ॥ ೧ ॥

ರಾಗ ಕೇದಾರಗೌಳ, ಝಂಪೆತಾಳ

ಧರಣಿಪತಿಯಿತ್ತ ಚಿಂತಿಸು ತಿರ್ದನೇನೆಂಬೆ । ಧುರದಿ ಮಂತ್ರಿಯು ಸೋತವೇಲೆ ನಾನೆಂತು ॥ ತರಿವೆ ನೀ ಖೂಳರನು ಬೇರುಪಾಯವ ಕಾಣೆ । ಹರಹರೆನ್ನಲು ಮೋಸನಾಥ ಬಂದು ॥ ೧ ॥ ಸ್ವಾಮಿ ನೀ ಮರುಗದಿರು ಕಾಲಬದಲಾಗಿಹುದು । ನೀ ಮೊದಲಿನಂತೆ ಪೋಗದಿರು ನಾನಿದಕೆ ॥ ನೇಮದಲಿ ಮೇಲೆನಿಪ ಹಂಚಿಕೆಯು ಹೂಡುವೆನು । ಕ್ಷೇಮದಲಿ ನೀಡೆಸಗೆ ಬಲು ಸಹಾಯವನು ॥ ೨ ॥ ಎಂದೆನಲು ಧನಿಯೆಂದ ಮೋಹಿದೆನು ಬಲು ಬಂಟ । ಮಂದಮತಿಗಳ ಮುರಿಯೆ ಬೇಕಾದುದನ್ನು ॥ ಇಂದಿನಿಂದಲೆ ಕೊಡುವೆ ಕಾರ್ಯಸಾಧನೆಯಾಗೆ । ಮುಂದೆ ನಿನಗೊಪ್ಪುವುದು ಕೀರ್ತಿ ಧನಿಬಂಟ ॥ ೩ ॥ ಪೊಕ್ಕಲೆಬ್ಬಿಸಲಾರೆ ಗೇಣಿ ಪಡೆಯಲು ಬಾರ । ದೊಕ್ಕಲುಗಳಿಂದೆನಗೆ ಬಂಟನೀಸೀಗ ॥ ಸೊಕ್ಕ ರೈತರ ಮುರಿಯೆ ಹೊರಡು ಬಲು ತ್ವರೆಯಿಂದ । ಬಿಕ್ಕಟ್ಟು ತೊಲಗೆ ನೀನೆಲೆ ಮಂತ್ರಿದಿಟವು ॥ ೪ ॥

ಭಾಮಿನಿ

ಮಂತ್ರಿ ತಾನಾಗುವ ಸುಯೋಗವು । ಬಂತೆನುತ ಹೊರವಂಟು ಬಂಟನು । ತಂತ್ರದಲಿ ಕೆಲ ರೈತರನು ಕರೆದೆಂದನೊಲವಿನಲಿ ॥ ಇಂ ತ

ನಿಮ್ಮನು ಸುಲಿವ ಧನಿಗಳ। ನಂತ್ಯಗೊಳಿಸಲು ಹಿಂಸೆ ಸ
ಮಂತ್ರಿಯೆನ್ನನು ಮಾಡಿದೊಡೆಸಲೆ ಸುಖವು ನಿಮಗೆನುತ

ರಾಗ ಮಾರವಿ, ಅಷ್ಟತಾಳ

ನುಡಿವೆ ನಾನಹಿಂಸಾವಾದಿ । ಕೇಳಿರಯ್ಯ ॥ ಬಿಡರ
ದಿಂದ ನೋಡಬೇಕು । ಕೇಳಿರಯ್ಯ ॥ ನಡೆಯುದಿನ್ನು ನಿಮ್ಮ
ಕೇಳಿರಯ್ಯ । ಬಿಡಿರಿ ಸಂಘವನ್ನು ಸೇರಿರೆಮ್ಮ । ಕೇಳಿರಯ್ಯ
ನಾವು ಗೈದುದಿಲ್ಲ ಹಿಂಸೆ। ಪೇಳಿರಯ್ಯ। ನೀವು ನಮ್ಮ ದೂ
ಫಲವು। ಪೇಳಿರಯ್ಯ॥ ಯಾವ ಮಂತ್ರಿ ಬಂದರೇನು । ಪೇಳಿ
ನೋವು ಸುಮ್ಮಗಿರಲು ರೈತ ಜನಕೆ। ಪೇಳಿರಯ್ಯ ॥ ೨ ॥
ಸಚಿವನಿರಲು ನಿಮಗೆ। ಕೇಳಿರಯ್ಯ। ಜಾಳು ಕಷ್ಟವಾನು
ಯಾಗೆ। ಕೇಳಿರಯ್ಯ॥ ಹಾಳು ಕಳೆದು ಸುಖವು ಬರಲು।
ರಯ್ಯ। ಪೇಳ್ವೆ ನೈಕ್ಯದಿಂದ ಲೆನ್ನಕೂಡಿ। ಕೇಳಿರಯ್ಯ ॥
ಹಿಂದೆ ಮಂತ್ರಿ ನಿಮ್ಮನುಡಿಯು। ಪೇಳಿರಯ್ಯ। ಚಂದದಿಂ
ಮೋಸವೇಕೆ। ಪೇಳಿರಯ್ಯ॥ ಇಂದು ಗೈವಸಿರದೆ ನಿಮ್ಮ।
ರಯ್ಯ। ಹಿಂದೆ ನಾವು ಬರಲು ಸಾಧ್ಯವುಂಟೆ। ಪೇಳಿರಯ್ಯ ॥

ವಾರ್ಧಿಕ್ಯ

ಐಕ್ಯ ಭಂಜಕನೆ ಧನಿ ಬಂಟನೆಂಬುದು ಗೊತ್ತು। ಸಖ
ನ್ನೊಳೆಮಗಾರಿಗಾದರು ಬೇಡ। ನೈಕ್ಯ ಫಲ ನಿನ್ನ ನಂಬಲು
ಧನಿಗಳಲಿ ಮಂತ್ರಿಪದ ಬೇಕೆನ್ನುವ॥ ವಾಕ್ಯವನು ಹೊರತೆಮಗ
ಬೋಧನೆ ಸಾಕು । ಮುಖ್ಯ ಸಂಘದ ಶಕ್ತಿಯೆಂದರಿವೆನ್ನೈ ನಿನ್ನ
ತೆಗೆ ಮಿಕ್ಕಿಹೆವು ಧನಿ ಬಂಟನೆನುತ ರೈತರು ಜರೆದು ಕಳುಹಲಿತ್ತ

ಭಾಮಿನಿ

ಮಂತ್ರಿ ಯೋಚಿಸಿ ಗೆಲುವ ಬಗೆಯನು। ಯಂತ್ರ ಪ
ನೇರಿ ಹಾರಿದ। ನಂತರಿಕ್ಷದಿ ಶ್ವೇತದ್ವೀಪದ ಪತಿಯ ಪದಕ
ತಂತ್ರಗಾರನೆ ಸಲಹೆನಲು ಬಲ। ವಂತನೆನ್ನಗ್ರಜನು ಮರೆ ಹೆ
ಚಿಂತಿಸದೆ ನೀನೆವನ ಪಾತಾಳದಲಿಯೆಂದೆನಲು ॥ ೧ ॥

ಕಂದ

ತೆರಳಿದ ಮಂತ್ರಿಯು ನಮಿಸುತೆ। ವರ ಪಾತಾಳಕೆ ಬಳಿ
ರಕ್ಕಸಪತಿ'। ಯಿರಲೊಡ್ಡೋಲಗದಲಿ ಬಲು। ಭರದಿಂದ್ಯೆದ

ರನು ನೆಮಿಸುತಲೆಂದಂ ॥ ೧ ॥

ರಾಗ ಮಾರವಿ, ಏಕತಾಳ

ಬಾಗಿಲಲ್ಲಿ ಕಾಯುತಿರುವ । ರಾಕ್ಷಸೇಂದ್ರ । ನಿನ್ನೆ । ಬೇಗ ನೋಡಬಯಸುತಿರುವ । ರಾಕ್ಷಸೇಂದ್ರ ॥ ಸಾಗಿ ಬಂದ ಕಷ್ಟದಿಂದ । ರಾಕ್ಷಸೇಂದ್ರ ನಿನ್ನೆ । ವೇಗದಸ್ತ್ರಗಳನು ಪಡೆಯೆ ॥ ರಾಕ್ಷಸೇಂದ್ರ ॥ ೧ ॥ ದೀನನಂತೆ ಕಾಂಬನಿವನು । ರಾಕ್ಷಸೇಂದ್ರ । ನರರ । ಮಾನವೆಮಗೆ ವಹರಬಂದ । ರಾಕ್ಷಸೇಂದ್ರ ॥ ನೀನು ಪೇಳೆಕರೆವೆನೀಗ । ರಾಕ್ಷಸೇಂದ್ರ । ಬಂದ ಮಾನವನನು ನಿನ್ನ ಬಳಿಗೆ । ರಾಕ್ಷಸೇಂದ್ರ ॥ ೨ ॥

ಭಾಮಿನಿ

ಸೇವಕನ ನುಡಿಕೇಳಿ ಖಳಪತಿ । ಭಾವಿಸುತಲುರುತರದುಪಾಯವ । ಕೋವಿದನ ಕರೆತಾರೆನಲು ಚಾರಕನು ನಡೆತಂದು ॥ ಸಾವಧಾನದಿ ಬಾರೆನಲು ನರ । ಜೀವ ಬಂದಂತಾಗಿ ಸಂತಸ । ವಾವರಿಸಲೈ ತಂದು ಕರಗಳ ಮುಗಿಯಲಿಂತೆಂದ ॥ ೧ ॥

ರಾಗ ಕೇದಾರ ಗೌಳ, ಝಂಪೆ ತಾಳ

ಭೂಮಿಯೊಡೆಯನ ಮಂತ್ರಿ ಬಾರಯ್ಯ ಸಂತಸದಿ । ಭೀಮ ವಿಕ್ರಮಿಗಳೆಂತಿಹರು ॥ ಸ್ವಾಮಿ ಕಾರ್ಯವದೇನು ಚಿಂತಿಸದೆ ಪೇಳೆನಲು । ಆಮಹೀಪತಿ ಮಂತ್ರಿಯೆಂದ ॥ ೧ ॥ ಖಳಕುಲ ಶಿರೋಮಣಿಯೆ ಕೇಳಿಂದು ನಮಗೊಂದ । ತುಳಬನ್ನ ಬಂದಿರಲದನ್ನು ॥ ಬಲದಿಂದ ನಿಗ್ರಹಿಸಲಾರದೈ ತಂದೆನ್ನೈ । ಸಲೆಸಹಾಯವನು ಯಾಚಿಸಲು ॥ ೨ ॥ ಮಂತ್ರಿಯೆಂದುದನರಿತು ಖಳಪತಿಯು ನುಡಿದ ನಿ । ನ್ನಂತರಂಗವ ನರಿತೆನಿನ್ನು ॥ ಸಂತಸದಿ ನಾ ಸಹಾಯವ ನೀವೆ ರಕ್ಷಿಸೈ । ಎಂತಾದರೆಮ್ಮ ಹಿತಗಳನು ॥ ೩ ॥

ಭಾಮಿನಿ

ಜನರ ನೀ ಮರ್ಧಿಸಲು ನೆರವಾ । ಗೆನಗೆ ದೇಶದ ಸಕಲ ಸಂಪದ । ನಿನಗು ಸಮಪಾಲೆಂದು ತಿಳಿ ಬಳಿಕೆಮ್ಮ ನಾಡಿಂದು ॥ ನಿನಗವಶ್ಯವು ಸಕಲ ರೀತಿಯೊ । ಳೆನುತ ಮಂತ್ರಿಯು ನುಡಿಯೆ ಖಳಪತಿ । ಘನತರದ ಶಸ್ತ್ರಾಸ್ತ್ರ ಜನಗಳ ಕೊಟ್ಟು ಕಳುಹಿದನು ॥ ೧ ॥

ರಾಗ ಬಿಲಹರಿ, ತ್ರಿವುಡೆತಾಳ

ಇತ್ತ ಮಂತ್ರಿಯು ನವತರಾಸ್ತ್ರಗಳ ಬೆಂಬಲದಿ । ಕತ್ತರ
ನಿಮ್ಮನೆಸಲು ॥ ಚಿತ್ತವಿದ್ದರು ನಡೆಯದೆಮ್ಮೊಳೆಂದೆನುತ ಜನ ।
ನಿಂದ ರೈಕ್ಯದಲಿ ॥ ೧ ॥ ಎನೆಲವೊ ಕೊರಗ ಸುಬ್ಬಾದಿ ರೈತರೆ
ಹಾನಿ ಬರದಿರಲು ಶರಣಾಗಿ । ನಾನಿಂದು ಪಾತಾಳಪತಿಯ
ಪಡೆದು । ಸೇನೆ ಕಳುಹಿಸಿ ನಿಮ್ಮತ್ತರಿವೆ ॥ ೨ ॥ ಬಲ್ಲೆವೆಲೆ ಮಂ
ಮ್ಮ ನಾಡನು ಮಾರಿ । ಕೊಲ್ಲಲೆಮ್ಮನು ತಂದೆ ಶರವ ॥ ನಿಲ್ಲದಾ
ಜನಶಕ್ತಿಯಿದಿರದು ಬರಿಯ । ಹುಲ್ಲೆಂದು ತಿಳಿಗಳಹಬೇಡ ॥

ರಾಗ ತೋಡಿ ಮಟ್ಟೆ ತಾಳ

ಖೂಳಕೊರಗ ಸುಬ್ಬರಿಂದು । ಕಾಳಗದಲಿ ಮಡಿದರ
ನಾಳೆ ನಾಡೊಳಿಲ್ಲ ಕೂಗ । ಕೇಳಿ ಬರಿಸುವೆ ॥ ೧ ॥ ಹಲವರನ್ನು
ಲೆ ಕೊಂದ । ಫಲವು ನಿನ್ನ ಬೆನ್ನ ಬಿಡದು । ತಲೆಯ ಕಾಯ್ದು
ಮತ್ತೆ । ಕೊಲುವೆನೆನ್ನಲೊ ॥ ೨ ॥ ತಡೆಯಿರೆನ್ನ ಶರದಹತಿಯ
ವಿರೀಗ ಸುಮ್ಮಗೆಂದು । ಬಿಡದೆ ಮಂತ್ರಿ ಯೆಸೆಯಲಾಗ ಕಡಿದ
ಟರು ॥ ೩ ॥ ಜಾಣ ಮಂತ್ರಿಯಾಗಲೊಂದು । ಪ್ರಾಣವುಳ್ಳ
ಸೆಯೆ । ಬಾಣಹತಿಗೆ ಮೂರ್ಛೆ ಹೊಂದೆ । ಕಾಣುತಾಗಲು ॥ ೪

ವಾರ್ಧಿಕ್ಯ

ಧೀರ ರೈತರವನಿತೆಯರ ನೊಂದುಗೂಡಿಸುತೆ । ವೀರ ಕೆ
ಪತ್ನಿ ದೇವಿ ತಾನೈದಿ ಬಡ । ನಾರಿಯರ ಕೋಪಾಗ್ನಿಗಾಹುತಿಯ
ಲೆಂದು ಬಾಣತತಿಯಿಂ ಮುಚ್ಚಲು ॥ ಮಾರಿತಾ ನಾರಿಯರ
ಬಂದಿಹಳು । ಜಾರುವುದೆ ಲೇಸೆಂದು ತಿಳಿದು ಮಂತ್ರಿಯು
ಸಾರಿದನು ನಿಜಪುರಕೆ ಕೊರಗಾದಿಗಳು ಕಾಣದಂತಾಗೆ
ಯಿಂದ ॥ ೧ ॥

ಕಂದ

ಮಂತ್ರಿಯು ಮಾಯೆಯನರಿಯದೆ । ಕಾಂತನನರಸುತ
ದೇವಿಯು ಬನ್ನದಿ । ತಂತ್ರಕೆ ಸಿಲುಕಿದೆನೆನ್ನುತ । ಚಿಂತಿಸಿದಳು
ಶೋಕಾಕ್ರಾಂತೆಯು ತಾನುಂ ॥ ೧ ॥

ರಾಗ ಪೂರವಿ, ಏಕತಾಳ

ಕಾಂತನೇಕೆ ಕಾಣಲಾರ। ನೆಯ್ಯೊಯ್ಯೊ। ಆತ। ಗಿಂಥ ಬನ್ನೆ ಬಂದುದೇತ। ಕಯ್ಯೊಯ್ಯೋ॥ ಮಂತ್ರಿಕುಟಿಲನವರನಿನ್ನು। ಅಯ್ಯೊಯ್ಯೋ। ಸುಮ್ಮ। ಗೆಂತು ಬಿಡುವ ತಾಳಲಾರೆ। ನೆಯ್ಯೊಯ್ಯೋ॥೧॥ ಇನ್ನು ಗೆಲುವ ಬಗೆಯನರಿಯೆ। ನೆಯ್ಯೊಯ್ಯೋ। ನಾವು। ಕಣ್ಣು ಕಾಣದಾದೆವಿಂದು। ಅಯ್ಯೊಯ್ಯೋ॥ ಎನ್ನ ರಮಣನೆಂತು ಬರುವ। ನೆಯ್ಯೊಯ್ಯೋ॥ ಅಬಲೆ। ಯೆನ್ನಗೋಳ ಯಾರು ಕೇಳ್ವ। ರಯ್ಯೊಯ್ಯೋ॥೨॥

ಭಾಮಿನಿ

ಇಂತು ಶೋಕಿಸುತಿರಲು ದೇವಿಯ। ಸಂತಯಿಸೆ ಜನಶಕ್ತಿ ಬಂದುರೆ। ಚಿಂತಿಸದಿರಿನ್ನವ್ವ ನಿನ್ನೆಯರಮಣನನು ಹುಡುಕಿ॥ ಮಂತ್ರಿಯನು ಸದೆಬಡಿವೆ ಬಿಡು ನಿ। ನ್ನಂತರಂಗದ ಶೋಕವನು ನಾ। ನಂತಕನು ದುಷ್ಟರಿಗೆ ಧೈರ್ಯವ ತಾಳು ನೀನೆಂದ॥೧॥ ಇರುವೆ ನಾನೆಗರದಲಿ ಕಾರ್ಮಿಕ। ಶರಧಿಯೈಕ್ಯದೊಳಿಲ್ಲಿ ಹಳ್ಳಿಯೊ। ಳುರುತರದ ಕೃಷಿಕಾರರೊಗ್ಗಟ್ಟಿನಲಿ ಒಟ್ಟಿನಲಿ॥ ಧರೆಯನಾವರಿಸಿಹೆನು ನಾನಾ। ತೆರದ ರೂಪಿಂ ಸುಜನರೆಲ್ಲರ। ಪೊರೆವ ದುಷ್ಟರ ಶಿಕ್ಷಿಸುವವರ ಶಕ್ತಿ ತಾನೆಂದ॥೨॥

ರಾಗ ಸಾಂಗತ್ಯ, ರೂಪಕತಾಳ

ಆಲಲನೆ ನುಡಿಗೇಳಿ ತನ್ನ ದು:ಖವ ತೊರೆಯೆ। ಲೀಲೆಯಿಂ ಜನಶಕ್ತಿ ಪೊರಟು॥ ಕಾಲತ್ರಯದ ಜ್ಞಾನ ಬಲದಿ ಕಾಣಲು ಕೊರಗ ಮೇಲೆನಿಪಸಂತಸದಿ ಬಂದು॥೧॥ ಕರಗಳನು ಪಿಡಿದೆಂವನಿನ್ನು ನೀ ಮುನ್ನಡೆಯೆ। ತೊರೆದು ಭೀತಿಯನೆಲ್ಲ ನಾವು॥ ಬರುವೆವೈ ಜನಶಕ್ತಿ ನಿನ್ನೊಳಿದೆ ನಂಬುಗೆಯು। ಭರದಿ ಮುನ್ನಡೆಯೆನ್ನಲಾಗ॥೨॥ ತರಳನುರುತರದ ಜನ ಸೇನೆಯನು ಕೂಡಿಕೊಂ। ಡಿರದೆ ಮಂತ್ರಿಯಪುರಕೆ ಬಂದು॥ ಕರೆದು ಮಂತ್ರಿಯನೆಂದ। ಶರಣಾಗದಿರೆ ನಿನ್ನ। ನಿರದೆ ಸಂಹರಿಸುವೆನು ಕೇಳು॥೩॥

ರಾಗ ಶಂಕರಾಭರಣ, ಮಟ್ಟೆತಾಳ

ಪೋರ ನಿನ್ನ ಬಲ್ಲೆ ನಾನು। ವೀರನಹುದು ಆದೊಡೇನು। ಧೀರತನವು ಮುನ್ನಿನಂತೆ ನಡೆಯುದೆನ್ನೊಳು॥೧॥ ಅಹುದುಬಲ್ಲೆ ಶರದ

ಹತಿಯು । ಸಹಿಸು ಬಣಗು ಮಾತ ನಿಲಿಸು । ಕುಹಕಿ ಸಚಿವ ತಡೆ
ನುತ್ತ । ವಿಹಿತ ಶರವನು ॥ ೨ ॥ ಎಸೆಯೆ ಮಂತ್ರಿಯುದನು ತಡೆದ
ಪೊಸತಮೋಘ ಶರವನೊಂದ । ನೆಸೆಯೆ ವೀರ ಮಂತ್ರಬಲದಿ ।
ದುಕೊಳ್ಳುತ ॥ ೩ ॥ ಸಚಿವಗದನು ಮರಳಿ ಬಿಡಲು । ಖಚಿತವ
ಮರಣವೆನುತ । ಉಚಿತ ರೀತಿಯಿಂದಲೋಡೆ । ಸಚಿವ ಬೆದರುತ ॥
ಶರವು ಬಡಿದು ಪ್ರಾಣಬಿಡಲು । ಕೊರಗ ಸುಬ್ಬರನ್ನು ಕೂಡಿ । ಪು
ಶೂರಬರಲು ಜನತೆ । ಹರುಷಗೊಂಡುದು ॥ ೫ ॥

ಭಾಮಿನಿ

ಇತ್ತ ಭೂಪಗೆ ಮಂತ್ರಿಧುರದಲಿ । ಸತ್ತ ವಾರ್ತೆಯ ಚರರು
ಹಲು । ಮತ್ತೆ ಗತಿ ತನಗಾರೆನುತಲತಿಶೋಕ ಭಾರದಲಿ ॥ ಎತ್ತಿ
ದಿರೆ ಬಲದಕರದೊಳಗುತ್ತ ಮಾಂಗವ ಸಚಿವನನುನೆನೆ । ಯುತ್ತ ವ
ರ್ಥೆಯನ್ನೈದಿ ಮತ್ತವನಿರದೆ ಮರುಗಿದನು ॥ ೧ ॥

ರಾಗ ದೇಶಿ, ರೂಪಕತಾಳ

ಸ್ವಾಮಿ ಕಾರ್ಯವ । ನೇಮದಿಂದಲಿ । ನೀ ಮಹಾತ್ಮನೆ । ಮುಗಿ
ಭೂಮಿ ಪತಿಯನು ॥ ೧ ॥ ಬಿಟ್ಟು ಪೋದೆಯಾ । ಕೊಟ್ಟ ಭಾಷೆ
ಕೊಟ್ಟು ದೇಹವ । ನಿನ್ನ । ಬಿಟ್ಟು ಬಾಳ್ವೆನೆ ॥ ೨ ॥ ಕಾಲ ಮುಗಿ
ತೋ । ಬಾಳು ಮುನಿಯಿತೋ । ಸೋಲು ಮುಸುಕಿತೋ । ಎ
ಜಾಲ ಹರಿಯಿತೋ ॥ ೩ ॥ ಎನ್ನ ಸೇವೆಯ । ನಿನ್ನ ತೆರದಲಿ । ಇ
ಮಾಳ್ಪರ । ತರಲು । ಬನ್ನ ವೆಂತುಟೋ ॥ ೪ ॥

ಭಾಮಿನಿ

ಇಂತು ಶೋಕಿಸುತಿರುವ ಭೂಪನ।ಸಂತಯಿಸಲೈತಂದು ಬಂಟ
ಚಿಂತೆ ಬಿಡು ಬಳಿಕಾನಿರಲು ನೀನೇಕೆ ದುಃಖಿಸುವೆ ॥ ಮಂತ್ರಿಪದಯ
ಗಿತ್ತೆಯಾದೊಡೆ । ಪಂಥಗೆಲಿಸುವೆ ನೋಡೆನಲು ಖಳ । ಮಂತ್ರಿಯಾ
ಮಾಡಲವನಿಂತೆಂದ ರೈತರೊಳು ॥ ೧ ॥

ರಾಗ ಕಾಂಬೋಧಿ, ತ್ರಿವುಡೆತಾಳೆ

ಪೋಸಗಾರನು ಮಂತ್ರಿಯುಳಿಯಲು । ವಾಸಿಗೊಂಡುದು ಸ
ಟವು ನಿ । ವ್ಯಾಸೆಯುಂತಾನಾಗೆ ಮಂತ್ರಿಯು । ಲೇಸಿನಿಂದ ॥ ೧
ಸಾಕು ನಿಲಿಸಿರಿ ನಿಮ್ಮ ಕದನವ । ನೇಕೆ ಕಸಿದಿರಿ ಭೂಮಿಯನು ಕೊ
ಬಾಕಿ ಗೈಸನು ಶರವ ಕೆಳಗಿಡೆ । ಜೋಕೆಯಿಂದ ॥ ೨ ॥ ಬಂಟನೆಂದ

ನಂಬಿ ಕೆಲವರು । ಕುಂಟು ಯೋಚನೆಯಿಂದಲಸ್ತ್ರದ । ಗಂಟ ಕಳಗಡೆಲಾಗಲವರನು । ಬಂಟ ಹಿಡಿದ ॥ ೩ ॥

ವಾರ್ಧಿಕ್ಯ

ದುರುಳನೆಂದುದ ನಂಬಿ ಕೆಟ್ಟೆವೆನುತಿರಲು ಹಲ । ವರನು ವಧಿಸುತ್ತೆ ಮಿಕ್ಕುಳಿದ ಕೆಲಬರಪಿಡಿದು । ಸೆರೆಗೆ ನೂಕಲು ಕೊರಗ ತಿಳಿದು ತಾನೈತಂದು ಮಿಕ್ಕವರನೆಚ್ಚರಿಸಲು ॥ ಮರುಳಾಗೆ ವಿಪ್ರನ ಮಾತಿಗೆಂದೆನುತಲವ । ರಿರದೆ ಶರಗಳ ಪಿಡಿದು ಮೋಸನಾಥನಿಗೆಸೆಯೆ । ಜರೆದವರ ಧನಿ ಬಂಟನುರುತರಾಸ್ತ್ರಗಳ ಮುಗುಳಿರದೆಚ್ಚನೇನೆಂಬೆನು ॥ ೧ ॥

ರಾಗ ಕಾಂಬೋಧಿ, ಅಷ್ಟತಾಳ

ಹುಲುಮಾನವರೆ ನಿಮ್ಮನೆಲೆಗೆ ನಾ ತರಲೆಂದು । ಬಲು ಬನ್ನ ಬಟ್ಟಲೀಗ ॥ ಛಲದಿಂದಲೆನಗಿಂಥ ಹಲವು ತೊಂದರೆಗಳನು । ಸಲೆಯೊಕ್ಕೆ ಕೊಡುವಿರೆಲೆ ॥ ೧ ॥ ಪರರೆಮ್ಮನುದ್ಧಾರ ನೆರೆಗೈದುದನು ಬಲ್ಲೆ । ವಿರದೆಮ್ಮ ನೀ ಕೊಂದು ॥ ಸೆರೆಯೊಳಿಕ್ಕುತ ದುಡಿವರನುದ್ಧರಿಸುತಾವ । ಪರಿಯಿಂದ ಬಾಳುವೆಯೋ ॥ ೨ ॥

ಭಾಮಿನಿ

ಮಂತ್ರಿ ಬೇಕಾಗಿಲ್ಲೆ ಮಗೆನಾ । ವಿಂಥ ಮೋಸದ ಮಾತಿಗಳಕೆವು । ನಿಂತಿರಲು ಸಕಲಾಧಿಕಾರವು ರೈತ ಸಮಿತಿಯೊಳು ॥ ಮಂತ್ರಿ ನಿನ್ನೆದಾರುಗೈದರು । ತಂತ್ರ ಬಲ್ಲೆವು ದುಡಿವವರು ನಿ । ನ್ನಂಥ ಧನಿ ಬಂಟರನು ನಡೆಯೆನಲಾಗಲಾ ಖಳನು ॥ ೧ ॥ ನಡೆಯುದಿನ್ನೀಪರಿಯ ಮೋಸದ । ನುಡಿಗಳಿಂದೀದುಡಿವ ಮಂದಿಯ । ಹಿಡಿದಿರಲು ಸಕಲಾಧಿಕಾರವೆನೆನ್ನ ನಾನೆಂತು ॥ ಬಿಡದೆ ಮಂತ್ರಿಯೆನುತ್ತ ಕರೆವೆನು । ನಡೆವೆ ನಾಕೇನೆಟನೆಯೆನ್ನಲು । ತಡೆದರವನೆನು ಜನರ ರಾಜ್ಯದ ವೀರ ಭಟರಾಗ ॥ ೨ ॥ ಹಲವರನು ನೀ ಘಾತಿಸಿಹೆಯಲೆ । ಬಲು ತರದಿ ನಿನ್ನನು ವಿಚಾರಿಸಿ, ಫಲವನೀಯಲು ಕರೆದಿಹರು ನೀ ಬರಲು ಬೇಕೆನುತ ॥ ಖಳನ ಕೊಂಡ್ಯೊದವರು ಜನರಿದಿ । ರಲಿ ನಿಲಿಸಲವನನು ವಿಚಾರಿಸಿ । ಕೊಲೆಗಡುಕನಿಗೆ ಯೋಗ್ಯವೆನಿಸಿದ ಶಿಕ್ಷೆ ವಿಧಿಸಿದರು ॥ ೩ ॥

ರಾಗ ಮಾರವಿ, ಏಕತಾಳ

ಬಂಟನ ನಾಶದ ಸುದ್ದಿಯ । ಬಂಟರು ತಿಳುಹಲು ಭೂಪನು । ಗಂಟಲು ಹೋಗುವ ಪರಿಯೊಳು । ಕಂಟಕ ಬಂತೆಂದು ॥ ೧ ॥ ಭಾಷಿಸಿ

ಪಾತಾಳದ ಪತಿ । ಧಾವಿಸಿ ಬಾರೆಂದೆನ್ನಲು । ಕಾವೆನು ಬೆದರದಿರೆನ್ನುತ
ಲಾವರ ಖಳಸೈದಿ ॥ ೨ ॥

ಕಂದ ಪದ್ಯ

ವಿವಿಧಾಸ್ತ್ರಗಳನು ಕರದಲಿ । ಜವದಿಂಪಿಡಿಯುತಲೆಸೆಯಲು ಮಂ
ಡಿಯು ಬೆದರುತೆ । ಭವರದಿ ಗೆಲ್ಲುವ ಬಗೆಯನು । ತವಕದಿ ಕಾಣದೆ
ಘೋಚಿಸೆಖಳಪತಿಯೆಂದಂ ॥ ೧ ॥

ರಾಗ ಮಾರವಿ, ಏಕತಾಳ

ಯಾರೆನಿಲುವವರು । ಎನ್ನಿದಿರೊಳು । ಯಾರೆ ನಿಲುವ
ವರು ॥ ಪಲ್ಲ ॥ ಜಾರದೆ ಕಲಹದಿ ಭಾರಿ ತೋಳ್ಬಲುಹಿನೊಳ್ । ಯಾರೆ
ನಿಲುವವರು ॥ ಅನು ಪಲ್ಲ ॥ ಭೂಪತಿಗಳನೆಲ್ಲ ಬಿಡದೆ । ಶರ ತಾಪಕೆ
ಸಿಲುಕಿಸಿ ಬರಿದೆ । ಪಾಪಿಗಳೆ ನಿಮಗೇತಕೆ ದುರ್ಬುದ್ಧಿ । ಯಾರೆ
ನಿಲುವವರು ॥ ೧ ॥

ಭಾಮಿನಿ

ಖಳಪತಿಯ ನುಡಿಗೇಳಿ ರೈತರ । ಬಲದ ವೀರನು ಬಂದು ಸದೆ
ಯುಲು । ಖಳಪತಿಯು ಬಿಡದೋಡು ತಿರಲಾ ಭೂಪ ತಾನರಿತು ॥
ಕಲಹಕಾನೇ ಪೊರಮಡುವೆವರ । ಲಲನೆಯುರ ಸಂತೈಸಿ ಬರುವೆನು ।
ವಿಲಯ ಕೀಗಲೆಪೋಪೆನೆನ್ನುತ ಬರಲು ಸತಿಯಂದು ॥ ೧ ॥

ಕಂದ

ಭೂಪನ ಮೋರೆಯ ಕಾಣುತ । ಕೋಪಕೆ ಕಾರಣವೇನೆಂದಾ
ತನ ಕೇಳಲು ॥ ಭೂಪತಿಯುರುಹಲು ಕದನದ ॥ ರೂಪವವನಿತೆಯು
ನುಡಿದಳು ತಡೆಯುತಲವನಂ ॥ ೧ ॥

ರಾಗ ಮಾರವಿ, ಏಕತಾಳ

ಕಾಳಗಕ್ಕೆ ಪೋಗಬೇಡ । ಪ್ರಾಣಕಾಂತ । ರೈತ । ಬೋಳು ಬೆಪ್ಪ
ನೆಲ್ಲವಿಂದು । ಪ್ರಾಣಕಾಂತ ॥ ಬಾಳಲಾರೆಧುರದಿ ಜಯಿಸಿ ಪ್ರಾಣ
ಕಾಂತ । ನಾವು । ತಾಳಿ ಜಾರಿಬಿಡುವುದುಚಿತ । ಪ್ರಾಣಕಾಂತ ॥ ೧ ॥

ಭಾಮಿನಿ

ವನಿತೆಯೆಂದುದ ಕೇಳಿ ಭೂಪನು । ಮುನಿದು ನೀನವಲಕ್ಷಣದ
ನುಡಿ । ಯೆನಗುಸುರುವುದು ಬೇಡ ಸಮರವು ಖಚಿತವದರಿಂದ ॥ ಮನೆ

ದ ಬೇಸರ ಕಳೆದು ಕಳುಹಿಸು । ಕೊನೆಗೊಳಿಸಿ ರೈತರನು ಬರುವೆನು । ಘನತೆಯಿರಲೆಂದೆನುತ ಮಡದಿಯು ಸಂತೈಸಿ ಬಂದು ॥ ೧ ॥

ರಾಗ ತೋಡಿ, ಮಟ್ಟೆತಾಳ

ಖೂಳ ನಿಲ್ಲು ತೋರ್ಪೆಶರದ । ಜಾಲ ಸಂದುದೆಲವೊ ನಿನ್ನೆ। ಕಾಲವೆನ್ನುತಾಗ ಖಳನು । ಕೋಲನೆಸೆಯುಲು ॥ ೧ ॥ ಪರರ ರಕ್ತ ಹೀರಿ ಬೆಳೆದ । ನೆರನೆ ನಿನ್ನ ಕಾಲವಾಯ್ತು । ಬರಿಯ ಮಾತು ಸಾಕೆನುತ್ತ ವೀರ ಕಡಿಯುಲು ॥ ೨ ॥ ಮಾಯೆಯಿಂದ ಮುಸುಕಿ ಖಳನು । ಸಾಯುಕಗಳ ನೆಸೆಯೆ ಶಕ್ತಿ । ಕಾಯ ಮರೆಸಿ ಮಾಯೆಯನ್ನುಪಾಯದಿಂದಲೆ ॥ ೩ ॥ ನೀಗಿ ಖಳನನೇಕ ಶರದಿ । ರೇಗಿಸಲ್ಕೆ ಖಳನು ಮುಷ್ಠಿ । ತೂಗಿಗುದ್ದಲಾಗಧೀರ । ಬಾಗಿ ತಡೆಯುತ ॥ ೪ ॥ ಖೂಳ ನಿನಗಿದಂತ್ಯವೆನುತ । ಸೀಳ ಲಸುವ ತೊರೆದು ಭೂಪ । ಬೀಳೆ ಜನರ ಹರ್ಷ ಧ್ವನಿಯು । ಕೇಳಿ ಬಂದುದು ॥ ೫ ॥

ಭಾಮಿನಿ

ದುಡಿವ ಜನತೆಯ ಸುಲಿವ ಮರ್ಧಕ । ರಡಿಯ ಹತಿಯಿನ್ನಿಲ್ಲವೆನುತಾ । ಕಡುಗಲಿಗಳತಿ ಸಂತಸದಿ ಹಂಚಿದರು ರಾಜ್ಯವನು । ದುಡಿವ ರೈತರ ನಡುವೆ ಸಕಲಕು । ದುಡಿವವನೆ ತಾನೊಡೆಯನೆಂಬಾ । ಕಡು ತರದ ಶಾಸನವು ಬರೆ ಜನ ಸಂತಸದಿ ನಲಿಯೆ ॥ ೧ ॥

ರಾಗ ಕಾಂಬೋದಿ, ಝಂಪೆತಾಳ

ಆರತಿಯ ಬೆಳಗಿ ಜನೆ । ವಾರಿಧಿಯ ಶಕ್ತಿ ಗದ । ಪಾರ ಶಾಶ್ವತವವನು ಮೀರಿ ॥ ಊರ ಸುಲಿವವರಿಗದು ಮಾರಿಯಾಗದೆ ಬಿಡದು । ಸೂರೆಗೊಂಬರಿಗೆ ನೆನಪಿರಲಿ ॥ ೧ ॥ ಜನಶಕ್ತಿಯಿದಿರು ಬಲು । ಘನದ ಮೋಸವು ಸಹಿತ ಮೊನೆ ಮುರಿದು ಬೀಳುವುದು ಖಚಿತ ॥ ಜನರ ಪಂಥಕೆ ಜಯವು । ಕೊನೆಯಧರ್ಮಕೆ ತಿಳಿಯೆ । ಕೊನೆಗಾದರೆಂಬುದದು ದಿಟವು ॥ ೨ ॥

ಭಾಮಿನಿ

ದುಡಿವ ರೈತರವಿಜಯದೀ ಕಥೆ । ಕಡು ಹೊಸತು ಬರೆ
ಹೊಸಬನು । ಅಡಿಗಡಿಗೆ ತಪ್ಪುಗಳ ಮಾಡಿರೆ ಮರೆತು ಮನ್ನಿಸ
ಬಡವ ಬಲ್ಲಿದರೆನ್ನದೆಲ್ಲರು । ದುಡಿಯೆ ಜನಹಿತಕಾಗಿ ನಾಡೊಳು ।
ಗೆ ಸಕಲರಿಗೊದಗುವುದು ಬಲು ಜಯವು ಮಂಗಲವು ॥ ೧ ॥

॥ ಸಮಾಪ್ತಿ ॥

ಕೊಹಿನೂರು ಪ್ರೆಸ್, ರಥಬೀದಿ ಮಂಗಳೂರು.

ತಪ್ಪೊಪ್ಪು

ಪುಟ	ಪದ್ಯ	ತಪ್ಪು	ಒಪ್ಪು
4.	ಪಂಕ್ತಿ 5	ಬೇರೆನಿದ್ದೀತು?	ಬೇರೇನಿದ್ದೀತು
6.	5.	‖೨‖	‖೧‖
6.	10.	ಗಟಕೀಗ	ಗಟ್ಟಿಕೀಗ
	13.	ಮುಡಿಗಳನು	ಮುಡಿಗಳನ್ನು
11.	7.	ಮೆಚಿದೆನು	ಮೆಚ್ಚಿದೆನು.
,,	9.	ಇಂತ	ಇಂತು
12.	6.	ಒಂಟನೆನು ರೈತರು	ಬಂಟನೆನುತ ರೈತರು
13.	2.	ಏಕತಳ	ಏಕತಾಳ
16.	7.	ಬಿಟ್ಟ ಬಾಳ್ವೆನೆ	ಬಿಟ್ಟು ಬಾಳ್ಪೆನೆ
17.	5.	ನಿನ್ನದಾರು	ನಿಶ್ನನೆದಾರು

ಮೂರು ಪುಸ್ತಕಗಳು

ಭಾರತದಲ್ಲಿ ನಲುವತ್ತು ದಿನಗಳು

(ಸೋವಿಯೆಟ್ ಕಲಾವಿದ ಚೆರ್ಕೊಸಾವ್ ಭಾರತ
ಸಂದರ್ಶಿಸಿದಾಗ ಕಂಡ ಅನುಭವಗಳು) ಬೆಲೆ 0—8—0.

●

ಮಾನವನ ವರ್ಗ ಗುಣ

(ಚೀನಿ ಕಮ್ಯುನಿಸ್ಟ್ ಮುಖಂಡ ಲಿವೋ ಶಾವೋ-ಚಿ
ಬರೆದ ಲೇಖನ) ಬೆಲೆ 0—1—6.

●

ಮಾಸ್ಕೊದಲ್ಲಿ ಏಸುಕ್ರಿಸ್ತ

(ಶ್ರೀ ಕೆ. ದಾಮೋದರನ್ ಬರೆದ ಪುಸ್ತಕ)
ಈಗಾಗಲೇ ಪ್ರಕಟವಾಗಲಿದೆ.

●

**ಇಂಗ್ಲಿಷ್ ಕನ್ನಡ ಮಲೆಯಾಳಿ ಭಾಷೆಗಳ
ಎಲ್ಲಾ ಪ್ರಗತಿಶೀಲ ಸಾಹಿತ್ಯ ಪುಸ್ತಕಗಳೂ, ಎಕ್ಸರ್‌ಸೈಜ್
ಪುಸ್ತಕಗಳೂ ದೊರೆಯುತ್ತವೆ.**

ನವಶಕ್ತಿ ಪಬ್ಲಿಕೇಶನ್ಸ್, ಲಿಮಿಟೆಡ್
ಕಾರ್ನಾಡ್ ಸದಾಶಿವರಾವ್ ರಸ್ತೆ, ಮಂಗಳೂರು 1.